**ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :-** ಮಾನ್ಯ ಅಧ್ಯಕ್ಷರೆ, ಜಟ್ಟಿಗೂ ಇದಕ್ಕೂ ಸಂಬಂಧವಿಲ್ಲ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :-** ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಯರು ರಾಜ್ಯ ಸರ್ಕಾರದ ಹಣದಿಂದ ಏನಾದರೂ ವ್ಯವಸ್ಥೆ ಮಾಡುತ್ತೇವೆಂಬ ಭರವಸೆಯನ್ನು ಕೊಡಲಿ, ಆ ಯೋಜನೆಯ ವಿಚಾರವನ್ನು ಬಿಟ್ಟು, ರಾಜ್ಯ ಸರ್ಕಾರದ ಹಣದಿಂದ ಏನು ಮಾಡುತ್ತಾರೆಂಬುದನ್ನು ಹೇಳಲಿ, ಅಲ್ಲಿ ಅವರಿಗೆ ಪರಿಹಾರವನ್ನೂ ಸಹ ಕೊಡುತ್ತಿಲ್ಲ.

**ಶ್ರೀ ವಸಂತ ಎ. ಸಾಲಿಯಾನ :-** ಮಾನ್ಯ ಅಧ್ಯಕ್ಷರೆ, ರಾಜ್ಯ ಸರ್ಕಾರ ಬದ್ಧವಾಗಿದೆ, ಕೇಂದ್ರ ಸರ್ಕಾರ ಅನುಮತಿ ಕೊಟ್ಟ ತಕ್ಷಣ ನಾವು ಮಾಡಿಕೊಡುತ್ತೇವೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :-** ಮಾನ್ಯ ಮಂತ್ರಿಯವರೆ, ನಿಮ್ಮ ಸರ್ಕಾರದ ಹಣದಿಂದ ಏನು ಮಾಡುತ್ತಿರೆಂಬುದನ್ನು ಹೇಳಿ, ಬರೀ ಬದ್ಧವಾಗಿದೆ ಎಂದು ಹೇಳುತ್ತೀರಿ, ಕೃತಿಯಲ್ಲಿ ಏನು ಮಾಡುತ್ತೀರೆಂಬುದು ಅಲ್ಲಿ ಆಗಬೇಕು.

**ಅಧ್ಯಕ್ಷರು :-** ಈಗ ಪ್ರಶ್ನೋತ್ತರ ವೇಳೆ ಮುಕ್ತಾಯವಾಯಿತು, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ 10ನೇ ಪಟ್ಟಿಯನ್ನು ಮಾನ್ಯ ಧರ್ಮಸಿಂಗ್‌ರವರು ಮಂಡಿಸಬೇಕು.

**ಆ. ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಖಾತೆ) :-** ಮಾನ್ಯ ಅಧ್ಯಕ್ಷರೆ, ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳ 10ನೇ ಪಟ್ಟಿಯಲ್ಲಿರುವ 117 ಪ್ರಶ್ನೆಗಳ ಪೈಕಿ 102 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

**ಅಧ್ಯಕ್ಷರು :-** ಮಂಡಿಸಲಾಯಿತು. ಅನುಬಂಧ-1

**2. ಪ್ರಕಟಣೆ**

**ವಿಷಯ: ಸದನವನ್ನು ಎರಡು ಘಂಟೆಗೆ ಮುಂದೂಡುವ ಬಗ್ಗೆ.**

**ಅಧ್ಯಕ್ಷರು :-** ಶುಕ್ರವಾರ, ಶನಿವಾರ ಮತ್ತು ಭಾನುವಾರಗಳಂದು ರಜೆಯಿರುವುದರಿಂದ ಇವತ್ತು ಬೆಳಿಗ್ಗೆ ಅಧಿವೇಶನ ಸೇರಬೇಕಾಗಿತ್ತು, ಅದಕ್ಕೋಸ್ಕರ ಸರ್ಕಾರದವರ ಮತ್ತು ವಿರೋಧ ಪಕ್ಷದವರ ಅಭಿಪ್ರಾಯದಂತೆ ಸಭೆಯು 2 ಗಂಟೆಯವರೆಗೆ ನಡೆಸಿ, 2 ಗಂಟೆಯ ನಂತರ ಅಧಿವೇಶನ ಇರುವುದಿಲ್ಲ. ಅನೇಕ ಸದಸ್ಯರುಗಳು 2.30 ಗಂಟೆಗೆ, 3.00 ಗಂಟೆಗೆ ಬಸ್ಸುಗಳ ಸೀಟುಗಳನ್ನು ಬುಕ್ ಮಾಡಿದ್ದಾರೆಂದು ಹೇಳಿರುವುದರಿಂದ, 2 ಗಂಟೆಯವರೆಗೆ ಅಧಿವೇಶನ ನಡೆಯುತ್ತದೆ. ಎರಡು ಗಂಟೆ ನಂತರ ನಡೆಯುವುದಿಲ್ಲ.

**3. ಅಧ್ಯಕ್ಷರ ಅಪ್ಪಣೆ ಮೇರೆಗೆ**

**ಅ. ರಾಜ್ಯಸರ್ಕಾರದಿಂದ ಕೇಂದ್ರಸರ್ಕಾರಕ್ಕೆ ಬರಪರಿಹಾರದ ಬಗ್ಗೆ ಮೆಮೋರ್ಯಾಂಡಮ್ ಕಳುಹಿಸುವ ಬಗ್ಗೆ ಪತ್ರಿಕೆಯಲ್ಲಿ ವರದಿಯಾಗಿರುವುದು.**

**ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) :-** ಮಾನ್ಯ ಅಧ್ಯಕ್ಷರೆ, ಇವತ್ತಿನ ದಿನ ನಾವು ಪ ತ್ರಿಕೆಗಳಲ್ಲಿ ಓದಿ ತಿಳಿದುಕೊಂಡಿದ್ದೇವೆ, ಮೊನ್ನೆದಿವಸ ಮಾನ್ಯ ಡಿ.ಕೆ. ಶಿವಕುಮಾರ್‌ರವರೂ ಸಹಿತ ಹೇಳಿದ್ದರು, ಕೇಂದ್ರ ಸರ್ಕಾರಕ್ಕೆ ನಾವು ಒಂದು ಮೆಮೊರ್ಯಾಂಡಮ್ ಅನ್ನು ಸಬ್‌ಮಿಟ್